ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಯಲ್ಲಿ ಕ್ಷ-ಕಿರಣ ಯಂತ್ರಗಳ ಬಗ್ಗೆ.

2946 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) *ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಯಲ್ಲಿ ಕ್ಷ - ಕಿರಣ ಯಂತ್ರ ಇದೆಯೇ?*

ಆ) *ಇಲ್ಲದೇ ಇದ್ದ ಪಕ್ಷದಲ್ಲಿ ಸರ್ಕಾರವು ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಗೆ ಕ್ಷ-ಕಿರಣ ಯಂತ್ರವನ್ನು ಒದಗಿಸಲು ಕ್ರಮ ತೆಗೆದುಕೊಳ್ಳುವುದು?*

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇದೆ.

ಆ) ಉದ್ಭವಿಸುವುದಿಲ್ಲ.

ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಬಂದ ಅರ್ಜಿಗಳ ಕುರಿತು.

2922 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಬಂದಿರುವ ಅರ್ಜಿಗಳೆಷ್ಟು-

ಆ) ಯಾವ ಸ್ಥಳದಲ್ಲಿ ವೈದ್ಯಕೀಯ ಕಾಲೇಜು ತೆರೆಯಲು ಅರ್ಜಿದಾರರು ಇಚ್ಛಿಸಿರುತ್ತಾರೆ?

ಇ) ಕೆಲವು ಸಂಸ್ಥೆಗಳ ವ್ಯಕ್ತಿಗತವಾದ ಅರ್ಜಿಗಳನ್ನು ಪರಿಗಣಿಸುವಂತೆ ವರಿಷ್ಠ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದಿಂದ ಏನಾದರೂ ನಿರ್ದೇಶನವು ಇದೆಯೇ?

ಈ) ಹಾಗಿದ್ದಲ್ಲಿ ಅಂತಹ ಸಂಸ್ಥೆಗಳ ವ್ಯಕ್ತಿಗತಗಳ ಹೆಸರುಗಳೇನು?

ಉ) 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವುದಾದರೂ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾಪವಿದೆಯೇ?

ಊ) ಹಾಗಿದ್ದಲ್ಲಿ ಸ್ವೀಕರಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 22

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು.

ಈ) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.

ಎ) ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು.

ಏ) ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕೆ.

ಐ) ಆಲ್ ಮಹಮದ್ ಸೊಸೈಟಿ, ಭದ್ರಾವತಿ.

ಊ) ಉದ್ಭವಿಸುವುದಿಲ್ಲ.

2922ರ ಅನುಬಂಧ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು
೧.	ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ
೨	ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು
೩.	ಅಲ್ ಮಹಮದ್ ಸೊಸೈಟಿ, ಭದ್ರಾವತಿ
೪.	ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕೆ.
೫.	ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
೬.	ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ಡಿ.ಕೆ.
೭.	ಕರ್ನಾಟಕ ಲಾ ಸೊಸೈಟಿ, ಬೆಳಗಾಂ
೮.	ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ
೯.	ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ
೧೦.	ಫಾದರ್ ಮುಲ್ಲರ್ ಇನ್ಸ್ಟಿಟ್ಯೂಟ್, ಕಂಕನಾಡಿ, ಮಂಗಳೂರು
೧೧.	ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಕಂಕನಾಡಿ, ಶಿವಮೊಗ್ಗ
೧೨.	ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ
೧೩.	ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು
೧೪.	ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್
೧೫.	ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ
೧೬.	ಅಲ್ ಮಹಮದ್ ವಿದ್ಯಸಂಸ್ಥೆ, ಶಿವಮೊಗ
೧೭.	ಶರಭೇಶ್ವರಿ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ
೧೮.	ನಾನಕಜೀರ್ ಫೌಂಡೇಷನ್, ಬೀದರ್
೧೯.	ಜಗದ್ಗುರು ಮೂರುಸಾವಿರದ ಮಠ, ಜೆ.ಜೆ. ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು ಹುಬ್ಬಳ್ಳಿ
೨೦.	ಶ್ರೀ ವೀಣಾಶಾರಧ ಎಜುಕೇಷನ್ ಸೊಕೈಟಿ, ಶಿವಮೊಗ್ಗ
೨೧.	ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು
೨೨.	ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.

ಹೊಸ ವೈದ್ಯಕೀಯ ದಂತ ಕಾಲೇಜುಗಳಿಗೆ ಮಂಜೂರಾತಿ.

2951 - ಶ್ರೀ ಪ್ರಭಾಕರ.ಎಸ್. ರಾಣೆ (ಕಾರವಾರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದಲ್ಲಿ ಹೊಸ ವೈದ್ಯಕೀಯ ದಂತ ಕಾಲೇಜುಗಳಿಗೆ ಮಂಜೂರಾತಿಗಾಗಿ ಸರ್ಕಾರದ ಮುಂದೆ ಏನಾದರೂ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಮೇಲಿನ ಕಾಲೇಜನ್ನು ಪ್ರಾರಂಭಿಸುವ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವ ಸಂಸ್ಥೆ ವ್ಯಕ್ತಿಗಳ ಹೆಸರುಗಳೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು